ಶ್ರೀ ಎ. ಲಕ್ಷ್ಮಿಸಾಗರ್.—ನಗರಸಭೆಗಳಿಂದ. ಪುರಸಭೆಗಳಿಂದ ಪ್ರಸ್ತಾವನೆಗಳು ಬಂದಿಲ್ಲ. ಅವರಿಂದ ಬಂದಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಸ್ವಾಮಿ, ಅವರು ನೋಡಿಲ್ಲ ಎಲ್ಲಾ ಕಡೆಯಿಂದ ಬಂದಿದೆ.

ಶ್ರೀ ಎ, ಲಕ್ಷ್ಮೀಸಾಗರ್.—ಬಂದಿಲ್ಲ.

ಕೆ.ಜಿ.ಎಫ್. ನಗರಸಭೆ ಸಾರ್ವಜನಿಕ ಸೌಕರ್ಯಗಳನ್ನು ಒದಗಿಸುವ ಬಗ್ಗೆ.

೨೫೮ ಶ್ರೀ ಟಿ. ಎಸ್. ವೆಣಿ (ಕೆ.ಜಿ.ಎಫ್) ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆ.ಜಿ.ಎಫ್. ನಗರಸಭೆಯ ಮೇಲೆ ಆರೋಪಗಳಿವೆಯೇ ಹಾಗಿದ್ದಲ್ಲಿ ಈ ಬಗ್ಗೆ ವಿಭಾಗಾಧಿಕಾರಿಗಳಿಂದ ನಗರ ಸಭೆಯ ವಿಸರ್ಜನೆಗೆ ಸೂಚನೆಗಳೇನಾದರೂ ಬಂದಿದೆಯೇ ಹಾಗಿದ್ದರೆ ಸರ್ಕಾರವು ವಿಭಾಗಾಧಿಕಾರಿಗಳ ಸೂಚನೆಯ ಬಗ್ಗೆ ಕ್ರಮ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣಗಳೇನು ?

ಆ) ಕೆ.ಜಿ.ಎಫ್.ನ ಈಗಿನ ಜನಸಂಖ್ಯೆ ಮತ್ತು ಸಾರ್ವಜನಿಕ ಸೌಕರ್ಯಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಕೆ.ಜಿ ಎಫ್ ಮುನ್ಸಿಪಾಲಿಟಿ ಖರ್ಚು ಮಾಡಿರುವ ಹಣವೆಷ್ಟು (ಅಭಿವೃದ್ಧಿ ಮತ್ತು ನಿರ್ವಹಣೆಗೆ ಪ್ರತ್ಯೇಕ ಅಂಕಿಗಳನ್ನು ಒದಗಿಸುವುದು)

ಇ) ಕೆ.ಜಿ.ಎಫ್ ನಗರಸಭೆಯಲ್ಲಿ ಜನತಾ ಮನೆ ಕಟ್ಟುವ ಯೋಜನೆ ಇದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಕೆ.ಜಿ.ಎಫ್. ನಗರಸಭೆಯ ಮೇಲೆ ಆರೋಪಗಳು ಇವೆ. ೧೯೬೪ರ ಕರ್ನಾಟಕ ಪುರಸಭೆಗಳ ಅಧಿನಿಯಮದ ೩೧೬ನೇ ಪ್ರಕರಣದ ಅನ್ವಯ ಈ ರಾಬರ್ಟ್‌ಸನ್‌ಪೇಟೆ ನಗರಸಭೆಯನ್ನು ರದ್ದು ಪಡಿಸಲು ವಿಭಾಗಾಧಿಕಾರಿಗಳು ಶಿಫಾರಸ್ಸು ಮಾಡಿದ್ದಾರೆ. ಅದರಂತೆ ಪ್ರಸ್ತುತ ಅಧಿನಿಯಮದ ೩೧೬ನೇ ಪ್ರಕರಣದ ಪ್ರಕಾರ ಸರ್ಕಾರ ನೋಟೀಸನ್ನು ಜಾರಿ ಮಾಡಿದೆ. ನಗರಸಭೆಯಿಂದ ಉತ್ತರ ಬಂದನಂತರ ನಿಯಮಾವಳಿ ರೀತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಆ) ೧೯೮೧ರ ಜನಗಣತಿಯಂತೆ ಜನಸಂಖ್ಯೆ ೧,೪೪,೪೦೬ ನವೆಂಬರ್ ೧೯೮೫ರ ಅಂತ್ಯದವರೆಗೆ ಮಾಡಿರುವ ಖರ್ಚು.

ಅಭಿವೃದ್ಧಿಗಳಿಗೆ ರೂ. ೩,೦೦,೯೦೦

ನಿರ್ವಹಣೆಗೆ ರೂ. ೩,೨೪,೮೦೭

ಇ) ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ (ಶ್ರೀ ಟಿ. ಎಸ್. ವೆಣಿಯವರ ಪರವಾಗಿ).—ಈ ಪುರಸಭೆಯಲ್ಲಿ ಲಕ್ಷಾಂತರ ರೂಪಾಯಿಯ ಅವ್ಯವಹಾರ ನಡೆದಿದೆ. ವಿಭಾಗಾಧಿಕಾರಿಗಳು ಈ ಪುರಸಭೆಯನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ೧೯೮೫ರ ನವೆಂಬರ್‌ನಲ್ಲಿ ಶಿಫಾರಸ್ಸು ಮಾಡಿದ್ದಾರೆ. ಇಷ್ಟು ವರ್ಷವಾದರೂ ಕೂಡ ಏತಕ್ಕೆ ನಿಧಾನ ಮಾಡಿದ್ದೀರಿ. ಇದರ ಜೊತೆಗೆ ಜನತಾ ಪಕ್ಷ ಸಿಪಿಎಂ, ಕಾಂಗ್ರೆಸ್, ಡಿಎಂಕೆ ಎಲ್ಲ ರಾಜಕೀಯ ಪಕ್ಷಗಳು ಇದಕ್ಕೆ ಬೆಂಬಲ ಕೊಟ್ಟಿವೆ. ಮನವಿ ಕೂಡ ಮಾಡಿವೆ. ರಾಬರ್ಟ್ಸನ್ ಟೌನ್ ಕೂಡ ಬಂದ್ ಮಾಡಿದ್ದಾರೆ. ಆದರೂ ಕೂಡ ಅಲ್ಲಿಯ ಮುನಿಸಿಪಲ್ ಪ್ರೆಸಿಡೆಂಟರು ಏನಿದ್ದಾರೆ ಅವರು ಯಾರೂ ನನ್ನನ್ನು ಏನೂ ಮಾಡುವುದಕ್ಕಾಗುವುದಿಲ್ಲ, ಹಾಗೆ ನಾನು ಎಲ್ಲ ಬಿಗಿ ಮಾಡಿಕೊಂಡಿದ್ದೇನೆ ಎಂದು ಹೇಳಿಕೊಂಡು ತಿರುಗುತ್ತಿದ್ದಾನೆ. ಇಷ್ಟಾದರೂ ಏಕೆ ಅದನ್ನು ಸೂಪರ್ ಸೀಡ್ ಮಾಡಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—ಅಧ್ಯಕ್ಷರೇ ಕಾನೂನು ಪ್ರಕಾರ ಆಪಾದನೆಗಳು ಬಂದಿರುವುದು ನಿಜ. ಆದರೆ ಅದನ್ನು ಸೂಪರ್‌ಸೀಡ್ ಮಾಡುವ ಮುಂಚೆ ಷೋಕಾಸ್‌ನೋಟೀಸ್ ಕೊಡಬೇಕು. ಹಾಗೆ ಕೊಟ್ಟೂ ಅವರಿಂದ ಉತ್ತರ ಬರದಿದ್ದರೆ ನಿಗದಿಪಡಿಸಿದ ಸಮಯದ ನಂತರ ಮುಂದಿನ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಷೋಕಾಸ್‌ನೋಟಿಸ್ ಅವಧಿ ಆಗಲೇ ಮುಗಿದಿದೆ. ಆದರೂ ಏಕೆ ಕ್ರಮ ಕೈಗೊಂಡಿಲ್ಲ ?

ಶ್ರೀ ಎ. ಲಕ್ಷ್ಮೀಸಾಗರ್.—ನೋಡೋಣ. ಅದಕ್ಕೆಲ್ಲ ಟೈಮ್ ಹಿಡಿಯುತ್ತದೆ. ಕ್ರಮ ತೆಗೆದು ಕೊಳ್ಳಲಿಕ್ಕೂ ಟೈಮ್ ಬೇಕಲ್ಲ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ.—ಅಧ್ಯಕ್ಷರೇ, ಧಾರವಾಡವು ಯೂನಿವರ್ಸಿಟಿ ಸ್ಥಳವಾಗಿದ್ದು ಅಲ್ಲಿ ಅಡ್ಡಾಡಲಿಕ್ಕೆ ಸ್ಥಳ ಇಲ್ಲ ರೋಡ್‌ನಲ್ಲಿ ಸಾವಿರಗಟ್ಟಲೆ ಅಂಗಡಿಗಳು ದುಡಿದು ಉಪಜೀವನ ಮಾಡುವ ಜನಗಳಿಂದ ಅವರ ಬಿಜನೆಸ್ಸಿನಿಂದ ತುಂಬಿಹೋಗಿದೆ, ಅವರಿಗೆಲ್ಲ ಮಾರುಕಟ್ಟೆ ಬಳಿ ಇರುವ ಖಾಲಿ ಜಾಗದಲ್ಲಿ ಅಂಗಡಿ ಕಟ್ಟಿಸಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—ಧಾರವಾಡ ಹುಬ್ಬಳ್ಳಿ ಮಹಾನಗರಸಭೆಯಿಂದ ಇದರ ಬಗ್ಗೆ ಪ್ರಸ್ತಾವನೆ ಬಂದ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಚಂದ್ರಕಾಂತ ಜಿ. ಬೆಲ್ಲದ.—ನಗರಸಭೆಯವರು ಯಾರು ಕಷ್ಟಪಟ್ಟು ದುಡಿದು ಕಂದಾಯ ಕಟ್ಟಿರುವರೋ ಅಂಥವರ ಅಂಗಡಿಗಳನ್ನೂ ಕೆಡವಿದ್ದಾರೆ. ಇದರ ವಿರುದ್ಧ ತೀವ್ರ ಕ್ರಮ ಕೈಗೊಳ್ಳುವಿರಾ

ಶ್ರೀ ಎ. ಲಕ್ಷ್ಮೀಸಾಗರ್.—ಲೈಸೆನ್ಸ್ ಇಲ್ಲದೆ ರಸ್ತೆ ಪಕ್ಕದಲ್ಲಿ ಕಟ್ಟಿರುವ ಅಂಗಡಿಗಳನ್ನು ಮಾತ್ರ ತೆಗೆದಿರುವುದಾಗಿ ಹೇಳಿದ್ದೇನೆ. ಪರವಾನಿಗೆ ಇರುವ ಅಂಗಡಿಗಳನ್ನು ನಾವು ಮುಟ್ಟಿಲ್ಲ. ಚಿಕ್ಕಪುಟ್ಟ ಅಂಗಡಿಗಳಿಗಾಗಿ ಬದಲಿ ವ್ಯವಸ್ಥೆಯನ್ನು ರೂಪಿಸಲಾಗುತ್ತಿದೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ.—ಟ್ಯಾಕ್ಸ್ ಕಟ್ಟಿಯೂ ಅಂಗಡಿ ಕೆಡವಿರುವವನ್ನು ತೋರಿಸಲೇ ?

ಶ್ರೀ ಎ. ಲಕ್ಷ್ಮೀಸಾಗರ್.—ಅಂಥವಿದ್ದರೆ ವಿಚಾರಿಸುತ್ತೇನೆ.

ಶ್ರೀ ಸಿ. ಭೈರೇಗೌಡ.—ಸ್ವಾಮಿ, ಒಂದನೇ ಪ್ರಶ್ನೆಗೆ ಬಂದಿದೆ ಎಂದು ಹೇಳಿದ್ದಾರೆ. ಆ ಬೇಡಿಕೆ ಯಾವಾಗ ಬಂತು ? ಮತ್ತು ತಯಾರಿರುವ ಸಂಕ್ಷಿಪ್ತ ಅಂದಾಜಿನ ಪೊತ್ತ ಎಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—೧೯೮೫ರಲ್ಲಿ ಬಂತು ಕಾವೇರಿ ನದಿಯಿಂದ ೧೨ ಪಟ್ಟಣಗಳಿಗೆ ನೀರು ಒದಗಿಸುವ ಯೋಜನೆ ಆದು. ೧೦೦ ಕೋಟಿ ರೂ.ಗಳ ಕರಡು ಯೋಜನೆ ತಯಾರಾಗಿದೆ.

ಶ್ರೀ ಸಿ. ಭೈರೇಗೌಡ.—ವಿವರವಾದ ಅಂದಾಜು ತಯಾರಿಸಲು ಬಿಡಬ್ಲ್ಯುಎಸ್‌ಎಸ್‌ಬಿಗೆ ಸರ್ಕಾರದ ಆದೇಶವೇನಾದರೂ ಹೋಗಿದೆಯೇ ? ಇಲ್ಲದಿದ್ದರೆ ಮುಂದೆ ತಿಳಿಸಲಾಗುವುದೇ ?

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲ, ಮುಂದೆ ತಿಳಿಸಿವ ಬಗ್ಗೆ ಯೋಚಿಸಲಾಗುವುದು.

ಶ್ರೀ ಸಿ. ಭೈರೇಗೌಡ.—ಈ ಯೋಜನೆಯನ್ನು ಏನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದೀರಾ ? ಇಲ್ಲದಿದ್ದರೆ ಸೇರಿಸಲಾಗುವುದೇ ?

ಶ್ರೀ ಎ. ಲಕ್ಷ್ಮೀಸಾಗರ್.—ಇದಕ್ಕೆ ವಿವರವಾದ ಅಂದಾಜುಪಟ್ಟಿ ತಯಾರು ಮಾಡಿಲ್ಲ. ಇನ್ನೂ ಕೈಶವಾವಸ್ಥೆಯಲ್ಲೇ ಇದೆ, ೧೯೮೫ರಲ್ಲಿ ಮಾಡಿದ ಅಂದಾಜು ಪಟ್ಟಿ ಪುನರ್ ಪರಿಶೀಲನೆ ಮಾಡಿ ಹಣದ ಲಭ್ಯತೆಯನ್ನು ಯೋಚಿಸಿ ಅನಂತರ ನೀರನ್ನು ತರಲಂ ಆಗುತ್ತದೋ ಇಲ್ಲವೋ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇದು ಗಂಭೀರವಾದ ವಿಚಾರ. ಲಘುವಾಗಿ ಉತ್ತರ ಕೊಡುವುದು ತಪ್ಪಾಗುತ್ತದೆ.

ಶ್ರೀ ಸಿ. ಭೈರೇಗೌಡ.—ಬಿಡಬ್ಲ್ಯುಎಸ್‌ಎಸ್‌ಬಿಯವರು ಈಗಾಗಲೇ ಬಿಇಎಂಎಲ್, ಬಿಜಿಎಂಎಲ್ ಜನರ ಸಂಪರ್ಕ ಪಡೆಯಲಾಗಿದೆಯೇ ತಿಳಿಸಿ. ಇದರ ಬದಲು ಸರ್ಕಾರವೇ ನೇರವಾಗಿ ಅವರ ಜೊತೆ ಸಂಪರ್ಕ ಬೆಳೆಸಿ ಅವರಿಂದ ಹಣ ಪಡೆಯುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ನೀರು ಸರಬರಾಜಿನ ಯೋಜನೆಗಳನ್ನೆಲ್ಲ ಸರ್ಕಾರ ನೀರು ಸರಬರಾಜು ಮಂಡಲಿ ಮೂಲಕವೇ ನಡೆಸುತ್ತದೆ. ಇದನ್ನು ಎಕ್ಸಾಮಿನ್ ಮಾಡಬೇಕಾದ ವಿಷಯವಾಗಿದೆ.